# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 160ರಲ್ಲಿ ದಿನಾಂಕ: 22.07.2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು**

ಜುಲೈ–2022 ಮಾಹೆಯ ಮೂರನೇ ಶನಿವಾರದ ವಾರ್ಡ್ ಸಮಿತಿ ಸಭೆಯನ್ನು ಕಾರಣಾಂತರಗಳಿಂದ ದಿನಾಂಕ: 22.07.2022 ರಂದು ನಡೆಸಲಾಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

➢ ಪ್ರೆಸ್ಟಿಜ್ ಬಾಗಮನೆ ಟೆಂಪಲ್ ಬೆಲ್ ಅಪಾರ್ಟ್‌ಮೆಂಟ್ ನಿವಾಸಿಯಾದ ಶ್ರೀ ಸತೀಶ್ ಕಾರಂತ್ ರವರು ಈ ಕೆಳಕಂಡ ದೂರು/ಅಹವಾಲು ಸಲ್ಲಿಸಿದರು.

- ಪಾಲಿಕೆಯ ವಾರ್ಡ್ ಮರುವಿಂಗಡಣೆ ಪ್ರಕ್ರಿಯೆ ಪೂರ್ಣಗೊಂಡು ಹೊಸ ವಾರ್ಡ್ ರಚನೆಯಾಗಿರುವ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ವಾರ್ಡ್‌ಗಳಿಗೆ ವಾರ್ಡ್ ಕಛೇರಿ ಸ್ಥಾಪಿಸಲು ಎಲ್ಲಿ ಸ್ಥಳ ಗುರುತಿಸಲಾಗಿದೆಯೆಂದು ಪ್ರಶ್ನಿಸಿದರು ಇದಕ್ಕೆ ಪ್ರತಿಕ್ರಿಯಿಸಿದ ವಾರ್ಡ್ ಅಭಿಯಂತರರು ತಾತ್ಕಾಲಿಕವಾಗಿ ಸಿದ್ದಲಿಂಗಯ್ಯ ಪಾರ್ಕ್ ಬಳಿ ಇರುವ ಬೆಂಗಳೂರು ಒನ್ ಕೇಂದ್ರದ ಬಳಿ ಸ್ಥಾಪಿಸಲು ಯೋಜಿಸಲಾಗಿದ್ದು, ಸುಭಾಷ್ ಗ್ರೌಂಡ್ ಅಭಿವೃದ್ಧಿಪಡಿಸುವ ಸಮಯದಲ್ಲಿ ವಾರ್ಡ್ ಕಛೇರಿ ಸ್ಥಾಪಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುತ್ತಿದ್ದು ಸದರಿ ಕಾಮಗಾರಿಗಳ ಪಟ್ಟಿ ನೀಡಲು ಕೋರಿದರು.
- ಕಳೆದ ಸಭೆಯಲ್ಲಿ ನೆಹರೂ ರಸ್ತೆಯಲ್ಲಿ ಎರಡೂ ಬದಿ ಪಾರ್ಕಿಂಗ್ ಮಾಡುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ದೂರು ಸಲ್ಲಿಸಲಾಗಿತ್ತು ಅದರಂತೆ ಟ್ರಾಫಿಕ್ ವಿಭಾಗದ ಅಧಿಕಾರಿಗಳು ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದ್ದರು. ಆದರೆ ಸಾರ್ವಜನಿಕರು ಕಳೆದ ವಾರದಿಂದ ಎರಡೂ ಬದಿಯಲ್ಲಿ ಪಾರ್ಕಿಂಗ್ ಮಾಡುತ್ತಿದ್ದು, ಸೂಕ್ತ ಕ್ರಮ ವಹಿಸುವಂತೆ ಕೋರಿದರು.

- ಪ್ರೆಸ್ಟಿಜ್ ಅಪಾರ್ಟ್ ಮೆಂಟ್ ಹತ್ತಿರ Sewage waste ಅನ್ನು ನೇರವಾಗಿ ಒಳಚರಂಡಿಗೆ ಬಿಡುತ್ತಿದ್ದು ಸದರಿಯವರಿಗೆ ತಿಳಿ ಹೇಳುವಂತೆ ಕೋರಿದರು.

➢ ಬೆಂಗಳೂರು ಅಪಾರ್ಟ್ಮೆಂಟ್ ಫೆಡರೇಶನ್ ಸದಸ್ಯರು ಈ ಕೆಳಕಂಡ ದೂರು/ಅಹವಾಲು ಸಲ್ಲಿಸಿದರು.

- ಸುಭಾಶ್ ಪಾರ್ಕ್ ನಲ್ಲಿ ಇರುವ ಶೌಚಾಲಯವನ್ನು ಸ್ವಚ್ಛಗೊಳಿಸಿ ನಿರ್ವಹಣೆ ಮಾಡುವಂತೆ ಕೋರಿದರು.
- ದಾವಣಗೆರೆ ಬೆಣ್ಣೆ ದೋಸೆ ಹೋಟೆಲ್ ಹತ್ತಿರ Culvert Slab ಮುರಿದು ಹೋಗಿದ್ದು ಸರಿಪಡಿಸುವಂತೆ ಕೋರಿದರು.
- 100 ಕೆ.ಜಿ. ಗಿಂತ ಅಧಿಕ ಕಸ ಉತ್ಪಾದನೆಯಾಗುತ್ತಿರುವ ವಸತಿ ಸಮುಚ್ಛಯಗಳಿಂದ ಕಸ ನಿರ್ವಹಣೆಗೆ ಶುಲ್ಕ ಪಾವತಿಸಲಾಗುತ್ತಿದ್ದು, ಉಚಿತವಾಗಿ ಕಸ ಸಂಗ್ರಹಣೆ ಯಾವಾಗ ಆಗುವುದೆಂದು ಪ್ರಶ್ನಿಸಿದರು ಇದಕ್ಕೆ ಪ್ರತಿಕ್ರಿಯಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ಅನುಮೋದನೆ ಹಂತದಲ್ಲಿದ್ದು, ಅನುಮೋದನೆ ದೊರೆತ ನಂತರ ಕಾರ್ಯ ರೂಪಕ್ಕೆ ಬರುವುದಾಗಿ ತಿಳಿಸಿದರು.

.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| ಸಹಿ/– | ಸಹಿ/– |
| ಕಾರ್ಯದರ್ಶಿಗಳು ವಾರ್ಡ್ ಸಮಿತಿ | ನೋಡಲ್ ಅಧಿಕಾರಿಗಳು |
| ವಾರ್ಡ್ ಸಂಖ್ಯೆ–160 | ವಾರ್ಡ್ ಸಂಖ್ಯೆ–160 |

**<u>ಪ್ರತಿಯನ್ನು:–</u>**

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು
3. ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ.
8. ಕಛೇರಿ ಪ್ರತಿ.